# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 165 | Pages. 2 | Date: 07-06-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 165 - ಪುಟಗಳು : 2 | 07-06-2026 | ಭಾನುವಾರ | Ph: 8762954248 | ದರ : ₹1

# ಸಂತ್ರಸ್ತ ರೈತರ ಊರಲ್ಲೇ ಉಪವಿಭಾಗ ಮಟ್ಟದ ಸಭೆ

## ಆಡಳಿತದಲ್ಲಿ ಬದಲಾವಣೆ ತಂದ ಸಕಲೇಶಪುರ ಎಸಿ | ಸಾರ್ವಜನಿಕರಿಂದ ಮೆಚ್ಚುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರೈತರ ಆತ್ಮಹತ್ಯೆ, ಆಕಸ್ಮಿಕ ಮರಣ ಮತ್ತು ಬಣವೆ ನಷ್ಟ ಪರಿಹಾರ ಯೋಜನೆಯಡಿ ಸಕಲೇಶಪುರ ತಾಲ್ಲೂಕಿನ ವಿವಿಧ ಪ್ರಕರಣಗಳ ನಿರ್ಣಯಕ್ಕೆ ಸಂತ್ರಸ್ತರ ಮನೆ ಬಾಗಿಲಿನಲ್ಲಿ ಸಮಾಲೋಚನೆಗಾಗಿ ಉಪ ವಿಭಾಗ ಮಟ್ಟದ ಸಮಿತಿಯ ಸಭೆಯನ್ನು ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರ ಅಧ್ಯಕ್ಷತೆಯಲ್ಲಿ ತಾಲ್ಲೂಕಿನ ಸಂತಹಳ್ಳಿಯಲ್ಲಿ ಶನಿವಾರ ನಡೆಸಲಾಯಿತು.

ಸಮಿತಿಯ ಸದಸ್ಯರಾದ ತಹಶೀಲ್ದಾರ್, ಪೊಲೀಸ್ ಆರಕ್ಷಕ ವೃತ್ತ ನಿರೀಕ್ಷಕರು, ಸಹಾಯಕ ನಿಬಂಧಕರು ಸಹಕಾರ ಇಲಾಖೆ, ತಾಲ್ಲೂಕು ಆರೋಗ್ಯ ಅಧಿಕಾರಿಗಳು ಮತ್ತು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಸಮಿತಿಯ ಸದಸ್ಯ ಕಾರ್ಯದರ್ಶಿ ಯು.ಎಂ. ಪ್ರಕಾಶ್ ಕುಮಾರ್ ಮಾತನಾಡಿ, ಸರ್ಕಾರ ಮತ್ತು ಇಲಾಖೆಗಳು ಸದಾ ರೈತರ ಬೆನ್ನೆಲುಬಾಗಿ ಇವೆ. ಇತರೆ ಇಲಾಖೆ ಯೋಜನೆಗಳಂತೆ ರೈತರ ಆತ್ಮಹತ್ಯೆ ಯೋಜನೆಯನ್ನು ಉದ್ದೇಶಿತವಾಗಿ ಪ್ರಚಾರಪಡಿಸುವುದಿಲ್ಲ ಇದು ಪರಿಹಾರ ಯೋಜನೆ ಪ್ರೋತ್ಸಾಹವಲ್ಲ ಎಂದು ಹೇಳಿದರು.



ಆಕಸ್ಮಿಕ ಮರಣ ಪ್ರಕರಣ, ರೈತರ ಆತ್ಮಹತ್ಯೆ ಮತ್ತು ಬಣವೆ ನಷ್ಟ ಯೋಜನೆಗಳ ಪರಿಹಾರಧನ ಸುಲಲಿತವಾಗಿ ಸಂತ್ರಸ್ತರಿಗೆ ತಲುಪಲೆಂದು ಪ್ರಕರಣಗಳಲ್ಲಿನ ಮೃತರ ವಾರಸುದಾರರು ಸಲ್ಲಿಸಬೇಕಾದ ದಾಖಲಾತಿಗಳನ್ನು ಸರಳವಾಗಿ ಸ್ಪಷ್ಟೀಕರಿಸಿ ವಾರಸುದಾರರಿಗೆ ಅರ್ಜಿ ಸಲ್ಲಿಸುವ ವಿಚಾರವಾಗಿ ತಿಳಿಸಲು ಕ್ರಮವಹಿಸಿರುವ ಬಗ್ಗೆ ತಿಳಿಸಿದರು.

ಎರಡು ರೈತರ ಆತ್ಮಹತ್ಯೆ ಪ್ರಕರಣಗಳಾದ ಎಸ್.ಜಿ. ದಿವಾಕರ, ಬಿ.ಕೆ. ತಿಪ್ಪೇಗೌಡ, ಎರಡು ರೈತರ ಆಕಸ್ಮಿಕ ಮರಣ ಪ್ರಕರಣಗಳಾದ ಕೆ.ಎನ್. ಪ್ರಕಾಶ್ ಮತ್ತು ನಂಜಯ್ಯ ಈ ನಾಲ್ಕು ಪ್ರಕರಣಗಳನ್ನು ಒಂದೊಂದು ಪ್ರಕರಣವಾಗಿ ಸಭಾ ಸಮಾಲೋಚನೆಗೆ ಮತ್ತು ನಿರ್ಣಯಗಳಿಗೆ ಸಂಬಂಧಿತ ಇಲಾಖೆಗಳಿಂದ ಸಲ್ಲಿಕೆಯಾಗಿದ್ದ ದಾಖಲೆಗಳಿಗನುಸಾರ ಮತ್ತು ಗ್ರಾಮಸ್ಥರುಗಳೊಂದಿಗಿನ ಸ್ಥಳ ಮಹಜರ್ ವೇಳೆ ಅಧಿಕಾರಿಗಳು ಕಂಡುಕೊಂಡಿದ್ದ ಮಾಹಿತಿಗೆ ಪೂರಕವಾಗಿ ಸಲ್ಲಿಕೆಯಾಗಿದ್ದ ದಾಖಲೆಗಳನ್ನು ಸಭೆಗೆ ಮಂಡಿಸಿ ವಿವರಿಸಿದರು.

### ಆತ್ಮಸ್ಥೈರ್ಯ ತುಂಬಲು ಭೇಟಿ

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ರೈತರ ಮನೆ ಬಾಗಿಲಿಗೆ ಮತ್ತು ಅವರ ಹೊಲಗದ್ದೆಗೆ ಈ ಉಪವಿಭಾಗ ಮಟ್ಟದ ಸಮಿತಿಯು ಬಂದು, ಸಂತ್ರಸ್ತ ಕುಟುಂಬ ಸದಸ್ಯರೊಡನೆ ಸಮಾಲೋಚನೆ ಮಾಡುವುದರಿಂದ ಸಂಬಂಧಿತ ಎಲ್ಲಾ ಇಲಾಖೆಯವರು ಸಂತ್ರಸ್ತರೊಂದಿಗೆ ಅವರ ಹತ್ತಿರದಲ್ಲಿ ಇದ್ದಾರೆ ಎಂಬ ಪ್ರಾಥಮಿಕ ಆತ್ಮಸ್ಥೈರ್ಯವನ್ನು ಕುಟುಂಬಗಳಿಗೆ ತುಂಬುವುದರ ಜೊತೆಗೆ ತಾಲ್ಲೂಕು ಆಡಳಿತ ವತಿಯಿಂದ ಏನೆಲ್ಲಾ ಸಹಾಯ ಹಸ್ತಗಳನ್ನು ಸಂತ್ರಸ್ತ ಕುಟುಂಬದವರಿಗೆ ಆಯಾ ಇಲಾಖೆಗಳ ಯೋಜನೆಗಳಾಗಿ ನೀಡಲು ಅವಕಾಶವಿದೆ ಎಂಬುದನ್ನು ಸ್ಥಳದಲ್ಲಿಯೇ ಮನವರಿಕೆ ಮಾಡುವ ಉದ್ದೇಶ ಹಾಗೂ ಸ್ಥಳದಲ್ಲಿಯೇ ಪ್ರಕರಣಗಳನ್ನು ಕಾನೂನಾತ್ಮಕವಾಗಿ ಪರಿಶೀಲಿಸಿ ನಿರ್ಣಯಿಸುವ ಕ್ರಮದೊಂದಿಗೆ ಕಾರ್ಯನಿರ್ವಹಿಸುವ ಉದ್ದೇಶವಾಗಿದೆ ಎಂದು ತಿಳಿಸಿದರು.

ಸಮಿತಿಯ ಎಲ್ಲಾ ಸದಸ್ಯರು ಮತ್ತು ಭಾಗಿಯಾಗಿದ್ದ ಅಧಿಕಾರಿಗಳು ಸಂತ್ರಸ್ಥರ ಕುಟುಂಬದ ಮಕ್ಕಳು ಶೈಕ್ಷಣಿಕವಾಗಿ ಮುಂದೆ ಬರಲು ಶಾಲಾ ಕಾಲೇಜು ಹಂತಕ್ಕೆ ವಿದ್ಯಾಭ್ಯಾಸ ಮಾಡಲು ಸರ್ಕಾರದಿಂದ ಪ್ರೋತ್ಸಾಹ ಇರುವ ಬಗ್ಗೆ, ಶೈಕ್ಷಣಿಕ ಶುಲ್ಕ ಪಾವತಿಸಲು ಇರುವ ರಿಯಾಯಿತಿಯ ಬಗ್ಗೆ, ವಸತಿ ಶಾಲೆಗಳಲ್ಲಿ ಸಂತ್ರಸ್ತರ ಕುಟುಂಬದ ಮಕ್ಕಳು ವಿದ್ಯಾಭ್ಯಾಸ ಮಾಡಲು ಇರುವ ಆದ್ಯತೆಯ ಅವಕಾಶದ ಬಗ್ಗೆ, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳಲ್ಲಿ ಸಂತ್ರಸ್ಥರ ಕುಟುಂಬಗಳಿಗೆ ಆದ್ಯತೆ ಮೇಲೆ ಸರ್ಕಾರದ ಸಹಾಯಧನದಡಿ ವಿವಿಧ ಲಭ್ಯ ಸವಲತ್ತುಗಳನ್ನು ಒದಗಿಸಲು ಇರುವ ಅವಕಾಶಗಳು ಮತ್ತು ಆದ್ಯತೆ ಬಗ್ಗೆ ಮನವರಿಕೆ ಮಾಡಿದರು.

ಅಂತಿಮವಾಗಿ ರೈತರ ಆತ್ಮಹತ್ಯೆ ಪ್ರಕರಣಗಳು ವಾಸ್ತವಿಕವಾಗಿ ಕೃಷಿ ಸಂಬಂಧಿತ ಸಾಲಗಳಾಗಿವೆ. ರೈತರ ಆಕಸ್ಮಿಕ ಮರಣಗಳು ರೈತಾಪಿ ಕೆಲಸಗಳಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿನ ಪ್ರಕರಣಗಳೇ ಎಂಬುದನ್ನು ದಾಖಲೆಗಳ ಆಧಾರವಾಗಿ ಸಮಿತಿಯವರು ನಿರ್ಣಯಿಸಿದ ಜೊತೆಗೆ ಸ್ಥಳೀಯರೊಂದಿಗೆ ಸಮಾಲೋಚನೆ ಮಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಕಾರ್ತಿಕ್, ಸಹಕಾರ ಇಲಾಖೆಯ ವ್ಯಾಪಾರಾಟಾಧಿಕಾರಿ ಮಂಜುನಾಥ್, ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್, ಕೃಷಿ ಅಧಿಕಾರಿ ಕೇಶವಮೂರ್ತಿ, ಕಂದಾಯ ನಿರೀಕ್ಷಕ ಮಹದೇವಸ್ವಾಮಿ, ತಾಂತ್ರಿಕ ವ್ಯವಸ್ಥಾಪಕ ರಾಥೋಡ್, ಸಹಾಯಕ ಪೊಲೀಸ್ ಉಪ ನಿರೀಕ್ಷಕ ಪ್ರಕಾಶ್ ನಾಯಕ್, ಗ್ರಾಮ ಆಡಳಿತ ಅಧಿಕಾರಿಗಳಾದ ಮೋಹನ್ ಕುಮಾರ್, ಕೋಟ್ರೇಶ್ ಮತ್ತು ಸಲ್ಮಾನ್ ಹಾಗೂ ಇತರರು ಉಪಸ್ಥಿತರಿದ್ದರು.

# ಆಲೂರು-ಭೈರಾಪುರ ದ್ವಿಪಥ ರಸ್ತೆ ಶೀಘ್ರ ಪೂರ್ಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪಟ್ಟಣದಿಂದ ಭೈರಾಪುರದವರೆಗೆ ದ್ವಿಪಥ ಡಾಂಬರ್ ರಸ್ತೆ ಕಾಮಗಾರಿಯನ್ನು ಶನಿವಾರ ಶಾಸಕ ಸಿಮೆಂಟ್ ಮಂಜು ಪರಿಶೀಲನೆ ನಡೆಸಿದರು.

ದ್ವಿಪಥ ರಸ್ತೆ ಕಾಮಗಾರಿ ಭರದಿಂದ ಸಾಗುತ್ತಿದೆ. ಈಗಾಗಲೆ ರಸ್ತೆಗೆ ಅಡಚಣೆಯಾಗಿದ್ದ ಮರಗಳನ್ನು ತೆರವು ಮಾಡಿ, ರಸ್ತೆ ಮಧ್ಯೆ ಡಿವೈಡರ್ ಅಳವಡಿಸಿ ರಸ್ತೆ ವಿಸ್ತರಣೆ ಕಾಮಗಾರಿ ಮುಗಿದಿದೆ. ಆಲೂರಿನಿಂದ ಭೈರಾಪುರದವರೆಗೆ 1.4 ಕಿ.ಮೀ. ರಸ್ತೆ ಡಾಂಬರು ಮಾಡಲಾಗುತ್ತಿದೆ. ರಸ್ತೆ ವಿಸ್ತರಣೆಗಾಗಿ ಭೈರಾಪುರ ಸಂಪರ್ಕಿಸುವ ಮೊದಲು ಸುಮಾರು 200 ಮೀ. ವ್ಯಾಪ್ತಿಯಲ್ಲಿ ಭಾರಿ ಗಾತ್ರದ ಮರಗಳನ್ನು ತೆರವು ಮಾಡಿರುವುದರಿಂದ ರಸ್ತೆ ಮೇಲೆ ಹಾಕಿರುವ ಮಣ್ಣು ಕುಸಿಯುತ್ತಿದೆ. ಈಗ ಈ ಸ್ಥಳದಲ್ಲಿ ಡಾಂಬರು ಹಾಕಿದರೆ ಪ್ರಯೋಜನವಾಗುವುದಿಲ್ಲ. ಮಳೆಗಾಲ ಸಮೀಪಿಸಿರುವುದರಿಂದ ಸದ್ಯ ಪಟ್ಟಣದಿಂದ 1.2 ಕಿ.ಮೀ. ರಸ್ತೆಗೆ ಡಾಂಬರು ಹಾಕಲಾಗುತ್ತಿದೆ. ಮುಂದಿನ ದಿನಗಳಲ್ಲಿ 200 ಮೀ. ರಸ್ತೆಗೆ ಡಾಂಬರು ಹಾಕಲಾಗುವುದು. ರಸ್ತೆ ಮೇಲೆ ಬಿದ್ದ ನೀರು ನಿಲ್ಲದೆ ಸರಾಗವಾಗಿ ಹೊರಗೆ ಹರಿಯುವಂತೆ ಗುಣಮಟ್ಟದ ಕಾಮಗಾರಿ ಮಾಡಲು ಇಂಜಿನಿಯರ್ ರವರಿಗೆ ಸೂಚಿಸಿದ್ದೇನೆ. ಅತಿ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳ್ಳುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಆಲೂರಿನಿಂದ ಸಕಲೇಶಪುರ, ಕೊಡ್ಲಿಪೇಟೆ ಮತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಭೈರಾಪುರದವರೆಗೆ ಏಕಮುಖ ಸಂಚಾರ ರಸ್ತೆ ಮಾತ್ರ ಇತ್ತು. ಪ್ರತಿದಿನ ಹಗಲಿರುಳು ಸಾವಿರಾರು ವಾಹನಗಳು ಸಂಚರಿಸುತ್ತಿದ್ದವು. ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜುರವರು ದ್ವಿಮುಖ ರಸ್ತೆಗೆ ಯೋಜನೆ ರೂಪಿಸಿ ಕಾಮಗಾರಿ ಕೈಗೊಂಡು ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಿರುವುದನ್ನು ಸಾರ್ವಜನಿಕರು ಪ್ರಶಂಸಿದ್ದಾರೆ.

# ಅಧ್ಯಯನ ಪದವಿ ಪೂರ್ವ ಕಾಲೇಜಿನಲ್ಲಿ ತಂಬಾಕು ನಿಷೇಧ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಅಧ್ಯಯನ ಪದವಿ ಪೂರ್ವ ಕಾಲೇಜು, ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ಹಾಸನ ಹಾಗೂ ಕಿರಿಯ ರೆಡ್ ಕ್ರಾಸ್ ಘಟಕದಿಂದ ವಿಶ್ವ ತಂಬಾಕು ನಿಷೇಧ ದಿನಾಚರಣೆ ಅಂಗವಾಗಿ ಮಾದಕ ವ್ಯಸನ ಮುಕ್ತ ಅರಿವು ಕಾರ್ಯಕ್ರಮ ನೆರವೇರಿತು.

ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಖಜಾಂಚಿ ಜಯೇಂದ್ರ ಕುಮಾರ್ ಮಾತನಾಡಿ, ರೆಡ್ ಕ್ರಾಸ್ ಸಂಸ್ಥೆಯು ಜಿಲ್ಲೆಯಲ್ಲಿ ಹಲವು ಮಾನವೀಯ ಸೇವಾ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದ್ದು, ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಸಾಲಗಾಮೆ ರಸ್ತೆ, ಕೃಷ್ಣ ಅಂಧ ಮಕ್ಕಳ ಶಾಲೆ ಸಮೀಪದ ರೆಡ್ ಕ್ರಾಸ್ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಕ್ಲಿನಿಕ್ ನಡೆಸಲಾಗುತ್ತಿದೆ. ಅನೇಕ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸಲಹೆಗಾರರಾದ ಜೆ. ಮಮತಾ ಮಾತನಾಡಿ, ತಂಬಾಕು ಸೇವನೆಯು ಮಾನವನ ಆರೋಗ್ಯ ಮತ್ತು ಜೀವನ ಹಾಳು ಮಾಡುತ್ತಿದೆ. ವಿದ್ಯಾರ್ಥಿಗಳು ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಅರಿತು ಇತರರಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ಕರೆ ನೀಡಿದರು.

ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ಅಧ್ಯಕ್ಷ ಶಬ್ಬೀರ್ ಅಹ್ಮದ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಿ, ತಂಬಾಕು ಸೇರಿದಂತೆ ಇತರ ದುಶ್ಚಟಗಳಿಂದ ದೂರವಿರಬೇಕು ಎಂದು ಸಲಹೆ ನೀಡಿದರು.

ಸಂಸ್ಥೆಯ ನಿರ್ದೇಶಕರಾದ ಎಸ್.ಎಸ್. ಪಾಷ ಹಾಗೂ ಕೆ.ಟಿ.ಜಯಶ್ರೀ ಮಾತನಾಡಿ, ಮಕ್ಕಳು ತಂಬಾಕು ಸೇವನೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ಅರಿವು ಪಡೆದು ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಅಧ್ಯಯನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಜೆ. ಚರಣ್ ಕುಮಾರ್ ಮಾತನಾಡಿ, ತಮ್ಮ ಮನೆ ಹಾಗೂ ಸಮಾಜದಲ್ಲಿ ಮಾದಕ ವ್ಯಸನ ಮತ್ತು ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಗಿರಿಗೌಡ ಹಾಗೂ ಕೆ.ಆರ್.ಮಧು, ಉಪಪ್ರಾಂಶುಪಾಲ ಮೋಹನ್ ಕುಮಾರ್, ಕಿರಿಯ ರೆಡ್ ಕ್ರಾಸ್ ಘಟಕದ ಸಂಯೋಜಕಿ ಅಶ್ವಿನಿ ಇತರರಿದ್ದರು.

# ಹೊಳೆನರಸೀಪುರದಲ್ಲಿ 325 ಬಿಎಲ್‌ಓಗಳ ನಿಯೋಜನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಗಾಗಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ 325 ಬೂತ್ ಮಟ್ಟದ ಅಧಿಕಾರಿಗಳ ನಿಯೋಜಿಸಲಾಗಿದೆ ಎಂದು ತಾಲ್ಲೂಕು ಮತದಾರರ ಪಟ್ಟಿಯ ವಿಶೇಷ ನೋಂದಣಾಧಿಕಾರಿ ಅಧಿಕಾರಿ ವಿ.ಮಂಜುನಾಥ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮದ ವೇಳಾಪಟ್ಟಿ ತಿಳಿಸಿದರು.

ವಿಶೇಷ ಸಮಗ್ರ ಪರಿಷ್ಕರಣೆಗೆ ಅ.1 ಅರ್ಹತಾ ದಿನವಾಗಿದೆ. ಅದಕ್ಕೂ ಮೊದಲು ಪೂರ್ವ ತಯಾರಿ, ತರಬೇತಿ ಮತ್ತು ಮುದ್ರಣ ಕೆಲಸ ಜೂ. 20 ರಿಂದ 29ರ ವರೆಗೆ ನಡೆಯಲಿದೆ. ಮತಗಟ್ಟೆ ಅಧಿಕಾರಿಯಿಂದ ಮನೆ-ಮನೆ ಭೇಟಿ ಜೂ.30 ರಿಂದ ಜು.29ರ ವರೆಗೆ ನಡೆಯಲಿದೆ ಎಂದರು.



ಮತಗಟ್ಟೆಗಳ ಪುನರ್‌ವಿಂಗಡಣೆ ಕಾರ್ಯ ಜು.29ರ ವರೆಗೆ ನಡೆದರೆ, ಕರಡು ಮತದಾರರ ಪಟ್ಟಿ ಆ.5 ರಂದು ಪ್ರಕಟವಾಗಲಿದೆ. ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಆ.5 ರಿಂದ ಸೆ.4ರ ವರೆಗೆ ಅವಕಾಶ ನೀಡಲಾಗಿದೆ ಎಂದರು.

ಸೂಚನೆ ಹಂತ/ಹಕ್ಕು ಮತ್ತು ಆಕ್ಷೇಪಣೆ ತಿರುವಳಿಗೆ ಆ.5 ರಿಂದ ಅ.3ರ ವರೆಗೆ ಸಮಯ ಇರಲಿದೆ. ಅಂತಿಮ ಮತದಾರರ ಪಟ್ಟಿಯನ್ನು ಅ.7 ರಂದು ಪ್ರಕಟಿಸಲಾಗುತ್ತದೆ. ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಐಆರ್ ನಿರ್ವಹಣೆಗಾಗಿ 325 ಬೂತ್ ಮಟ್ಟದ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ವಿಶೇಷ ತೀವ್ರ ಪರಿಷ್ಕರಣೆ ಕ್ಷೇತ್ರದ ಸುಮಾರು 2,25,086 ಮತದಾರರನ್ನು ಒಳಗೊಳ್ಳುತ್ತದೆ ಎಂದರು.

ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ ಬೂತ್ ಮಟ್ಟದ ಏಜೆಂಟ್ ನೇಮಕ ಮಾಡುವಂತೆ ಈಗಾಗಲೇ ವಿನಂತಿಸಲಾಗಿದೆ. ಆಯೋಗದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಸಕ್ರಿಯ ಭಾಗವಹಿಸುವಿಕೆ ಮತ್ತು ಪಾರದರ್ಶಕತೆ ಖಚಿತಪಡಿಸಿಕೊಳ್ಳಲು ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ಮತಗಟ್ಟೆಗೆ ಬೂತ್ ಮಟ್ಟದ ಏಜೆಂಟ್ ಗಳನ್ನು ನೇಮಿಸಲು ವಿನಂತಿಸಲಾಗಿದೆಯೆಂದು ಹೇಳಿದರು.

ಪ್ರಸ್ತುತ ವಿಧಾನಸಭಾ ಕ್ಷೇತ್ರದ ವಿಶೇಷ ಸಮಗ್ರ ಪರಿಷ್ಕರಣೆಯ ಪೂರ್ವಭಾವಿ ಕಾರ್ಯವಾಗಿ 2025ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು 2002ರ ಮತದಾರರ ಪಟ್ಟಿಯೊಂದಿಗೆ ಹೊಂದಾಣಿಕೆ ಮಾಡಿ, ಲಭ್ಯವಿರುವ ಮತದಾರರು ಹಾಗೂ ಅವರ ಸಂತತಿ ವಿವರಗಳನ್ನು 2025ನೇ ಸಾಲಿನ ಅಂತಿಮ ಮತದಾರರ ಪಟ್ಟಿಗೆ ಜೋಡಣೆ ಮಾಡಲಾಗುತ್ತದೆ. ಸಾರ್ವಜನಿಕರ ಸಲಹೆ ದೂರು ಆಲಿಸಲು ಸಹಾಯವಾಣಿ 08175-273261ಗೆ ಕರೆ ಮಾಡಬಹುದು. ಮತದಾರರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಮತದಾರರ ಸೌಕರ್ಯ ಕೇಂದ್ರ ಮತ್ತು ಮತಗಟ್ಟೆ ಅಧಿಕಾರಿಗಳ ಸೌಕರ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದರು.

ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ಮತ್ತಿತರರಿದ್ದರು.

# ಅಂಕಣ ಬರಹದಿಂದ ಚಿಂತನೆಗೆ ಹೊಸ ದಿಕ್ಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂಪಾದಕೀಯ ಪತ್ರಿಕೆಯ ಹೃದಯವಾಗಿದ್ದರೆ, ಅಂಕಣ ಬರಹ ಅದರ ಚಿಂತನೆಯ ವಿಸ್ತಾರ ರೂಪವಾಗಿದೆ. ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರವರೆಗೆ ಎಲ್ಲರನ್ನೂ ಅಂಕಣಗಳು ಆಕರ್ಷಿಸುತ್ತವೆ ಎಂದು ಸುಧಾ ವಾರಪತ್ರಿಕೆ ಹಿರಿಯ ಉಪ ಸಂಪಾದಕಿ ಉಮಾ ಅನಂತ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯಿಂದ ಶನಿವಾರ ನಡೆದ ಅಂಕಣಕಾರರು ಹಾಗೂ ಮಾಧ್ಯಮ ಸಂವಹನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ, ಸಮಾಜ ಹಾಗೂ ಸಂಸ್ಕೃತಿಯ ನಡುವಿನ ಕೊಂಡಿಯಾಗಿ ಅಂಕಣಗಳು ಕಾರ್ಯನಿರ್ವಹಿಸುತ್ತವೆ ಎಂದರು.

ಹಾಸನ ಜಿಲ್ಲೆಯ ಬಾನು ಮುಷ್ತಾಕ್ ಸೇರಿದಂತೆ ಅನೇಕ ಪ್ರತಿಭಾವಂತ ಲೇಖಕರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಜ.ನಾ. ತೇಜಶ್ರೀ, ರೂಪ ಹಾಸನ, ಶೈಲಜಾ ಹಾಸನ, ಸುಮಾ ವೀಣಾ, ಸುಷ್ಮಾ ಸಿಂಧು ಮೊದಲಾದವರ ಬರಹಗಳು ವಿಭಿನ್ನ ಆಯಾಮಗಳನ್ನು ಹೊಂದಿದ್ದು, ಓದುಗರಿಗೆ ಹೊಸ ಚಿಂತನೆಗಳನ್ನು ನೀಡುತ್ತಿವೆ ಎಂದು ತಿಳಿಸಿದರು.

ಅಂಕಣ ಬರಹದಲ್ಲಿ ಸೃಜನಶೀಲತೆ, ಚುರುಕು ಬುದ್ಧಿವಂತಿಕೆ ಮತ್ತು ಸ್ವಂತಿಕೆ ಅಡಕವಾಗಿರುತ್ತದೆ. ಹಾ.ಮಾ. ನಾಯಕ ಅವರ ಸಮೃದ್ಧಿ ಅಂಕಣ ಸೇರಿದಂತೆ ಅನೇಕ ಅಂಕಣಗಳು ಓದುಗರ ಮನ ಸೆಳೆದಿವೆ. ವಿದೇಶಗಳಲ್ಲಿಯೂ ಅಂಕಣ ಬರಹಗಳು ಜನಪ್ರಿಯವಾಗಿದ್ದು, ಸಮಾಜದಲ್ಲಿ ಸಕಾರಾತ್ಮಕ ಚಿಂತನೆಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ನುಡಿದರು.



ಇಂಗ್ಲಿಷ್‌ನ ಕಾಲಂ ಪದದಿಂದ ಅಂಕಣ ಬರಹದ ಪರಿಕಲ್ಪನೆ ರೂಪುಗೊಂಡಿದೆ.

ಜೇಮ್ಸ್ ಮ್ಯಾಡಿಸನ್ ಅವರು ಖ್ಯಾತ ಅಂಕಣಕಾರರಾಗಿದ್ದರು. ವಿಶ್ವದಾದ್ಯಂತ 200ಕ್ಕೂ ಹೆಚ್ಚು ಸಿಂಡಿಕೇಟ್‌ಗಳು ಅಂಕಣ ಬರಹಗಳ ಪ್ರಕಟಣೆಯಲ್ಲಿ ತೊಡಗಿವೆ.

ಕನ್ನಡ ಪತ್ರಿಕೋದ್ಯಮ ದಲ್ಲಿಯೂ ಅಂಕಣ ಬರಹಕ್ಕೆ ಶ್ರೀಮಂತ ಇತಿಹಾಸವಿದ್ದು, ಮಂಗಳೂರು ಸಮಾಚಾರ ಪತ್ರಿಕೆಯಲ್ಲಿ ವರದಿಯೂ ಅಲ್ಲದ, ಅಂಕಣವೂ ಅಲ್ಲದ ವಿಶಿಷ್ಟ ಲೇಖನಗಳು ಪ್ರಕಟವಾಗುತ್ತಿದ್ದವು ಎಂದು ಮನದಟ್ಟು ಮಾಡಿದರು.

ಡಿ.ವಿ.ಜಿ. ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕನ್ನಡ ಅಂಕಣ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದ್ದಾರೆ ಎಂದು ಹೇಳಿದರು.

ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ಅಂಕಣಗಳು ಇಂದಿಗೂ ಓದುಗರನ್ನು ಹೆಚ್ಚು ಸೆಳೆಯುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಓದುವ ಹವ್ಯಾಸ ಕುಂಠಿತವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಜ್ಞಾನದ ಅರಿವು, ಧನಾತ್ಮಕ ಚಿಂತನೆ, ಏಕಾಗ್ರತೆ ಹಾಗೂ ಬುದ್ಧಿಮಟ್ಟವನ್ನು ವೃದ್ಧಿಸಿಕೊಳ್ಳಲು ಓದುವ ಹವ್ಯಾಸವನ್ನು ರೂಢಿಸಿಕೊಳ್ಳುವುದು ಅಗತ್ಯ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್ ಮಾತನಾಡಿ, ಆಧುನಿಕತೆ ಬೆಳೆದಂತೆ ಪತ್ರಿಕಾ ಕ್ಷೇತ್ರವು ಬದಲಾವಣೆಯಾಗಿದೆ. ಮೊದಲೆಲ್ಲ ಲೇಖನಗಳಿಗೆ ಹೆಚ್ಚು ಜಾಗ ನೀಡಲಾಗುತ್ತಿತ್ತು. ಆದರೆ ಈಗ ಅದರ ಸ್ವರೂಪ ಬದಲಾಗಿದೆ. ಬರಹಗಾರರು ಸಹ ಆಧುನಿಕತೆಗೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಸಂಘದ ಉಪಾಧ್ಯಕ್ಷ ಜಿ. ಪ್ರಕಾಶ್, ಸಾಂಸ್ಕೃತಿಕ ಸಮಿತಿ ಸದಸ್ಯ ಸಿ.ಆರ್. ನವೀನ್ ಮಾತನಾಡಿದರು. ಸಮಿತಿ ಸಂಚಾಲಕ ಚಲಂ ಹಾಡ್ಲಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿದ್ದ ಪತ್ರಕರ್ತರು ಹಾಗೂ ಲೇಖಕರು ಸಂಪನ್ಮೂಲ ವ್ಯಕ್ತಿ ಅವರೊಂದಿಗೆ ಸಂವಾದ ನಡೆಸಿದರು.

# ಆಶ್ರಯದಲ್ಲಿದ್ದ ಬಾಂಗ್ಲಾ ಮಹಿಳೆಯರು ನಾಪತ್ತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಶಕ್ತಿ ಸದನ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಇಬ್ಬರು ಬಾಂಗ್ಲಾದೇಶದ ಮಹಿಳೆಯರು ರಾತ್ರೋರಾತ್ರಿ ನಾಪತ್ತೆಯಾಗಿದ್ದಾರೆ.

ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿದ್ದ ಇವರನ್ನು ಫೆ. 7ರಂದು ಬಂಧಿಸಿದ್ದ ಮಹಿಳಾ ಠಾಣೆ ಪೊಲೀಸರು ನಗರದ ಕೆ.ಆರ್.ಪುರಂನಲ್ಲಿರುವ ಶಕ್ತಿ ಸದನ ಕೇಂದ್ರಕ್ಕೆ ಬಿಟ್ಟಿದ್ದರು. ಸೀಲಾ ಶೇಕ್ ಹಾಗೂ ಸ್ವೀಟಿ ಮೊಂಡಾಲ್ ನಾಪತ್ತೆಯಾಗಿರುವ ಮಹಿಳೆಯರು. ಕಳೆದ 4 ತಿಂಗಳಿಂದ ಶಕ್ತಿ ಸದನ ಕೇಂದ್ರದಲ್ಲಿದ್ದ ಮಹಿಳೆಯರಿಂದ ಮೊಬೈಲ್ ಸೇರಿ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡಿದ್ದರು.

ಜೂನ್ 5ರ ರಾತ್ರಿ 9 ಗಂಟೆ ಸಮಯದಲ್ಲಿ ಊಟ ಮಾಡುತ್ತಿದ್ದ ಸಮಯದಲ್ಲಿ ಏಕಾಏಕಿ 2ನೇ ಮಹಡಿಯ ಕೊಠಡಿಯ ಗೇಟ್ ಮೇಲಿಂದ ಹಾರಿದ್ದಾರೆ. 34 ವರ್ಷದ ಸೀಲಾ ಶೇಖ್ 5.1 ಅಡಿ ಎತ್ತರ, ಕೋಲು ಮುಖ, ಗೋಧಿ ಮೈಬಣ್ಣ ಹೊಂದಿದ್ದು, ಸೀಮೆಂಟ್ ಕಲರ್ ಟಾಪ್, ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದರು. ಕನ್ನಡ, ಹಿಂದಿ ಹಾಗೂ ಬಾಂಗ್ಲಾ ಭಾಷೆ ಮಾತನಾಡುತ್ತಾರೆ.

27 ವರ್ಷದ ಸ್ವೀಟಿ ಮೊಂಡಾಲ್ 4.8 ಅಡಿ ಎತ್ತರ, ದುಂಡು ಮುಖ, ಬಿಳಿ ಬಣ್ಣ, ಪಿಂಕ್ ಕಲರ್ ಟಾಪ್, ನೀಲಿ ಬಣ್ಣದ ಸ್ವೆಟರ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾರೆ. ಈ ಸಂಬಂಧ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅವರ ಸುಳಿವು ಸಿಕ್ಕರೆ 08172-268967 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

# ಸ್ಪರ್ಧಾತ್ಮಕ ಪರೀಕ್ಷೆಗೆ ಈಗಿನಿಂದಲೇ ತಯಾರಿ ಆರಂಭಿಸಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಯುವ ಜನತೆ ದೊಡ್ಡ ಕನಸು ಕಾಣುವುದರ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಿಕೊಂಡು ಯಶಸ್ವಿಯಾಗಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸುವಂತೆ ಸಂಸದ ಶ್ರೇಯಸ್ ಎಂ.ಪಟೇಲ್ ಸಲಹೆ ನೀಡಿದರು.

ಜಿಲ್ಲಾ ಕೇಂದ್ರ ಗ್ರಂಥಾಲಯದದಲ್ಲಿ ಹಾಸನ ಸ್ಪರ್ಧಾ ಕುಟೀರ ಉದ್ಘಾಟಿಸಿ ಮಾತನಾಡಿದ ಅವರು, ಈ ಕುಟೀರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಅನುಕೂಲವಾಗುವಂತೆ ಉತ್ತಮ ರೀತಿಯಲ್ಲಿ ಸಜ್ಜುಗೊಳಿಸಿದ್ದು, ಕೇಂದ್ರವನ್ನು ಬಳಸಿಕೊಂಡು ಯುವ ಜನತೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು

ಈಗಾಗಲೇ 75 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಯುವ ಜನತೆ ನೋಂದಣಿ ಮಾಡಿಕೊಂಡು ಅಧ್ಯಯನ ಮಾಡುವಂತೆ ತಿಳಿಸಿದರಲ್ಲದೆ, ನೂತನ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಯ ಬಾಕಿ ಉಳಿದಿರುವ ಕೆಲಸಕ್ಕೆ ಅನುದಾನ ತಂದು ಕಾಯಕಲ್ಪ ನೀಡಲಾಗುವುದು ಎಂದು ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಇಂದು ಗಿಡ ನೆಟ್ಟು ಮಾತನಾಡಿದ ಅವರು, ಯಾವುದೇ ಫಲಾಪೇಕ್ಷೆ ಇಲ್ಲದೆ ಶುದ್ದ ಗಾಳಿ, ನೀರು ನೀಡುವ ಪ್ರಕೃತಿಯನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.




ಜಿಲ್ಲಾಡಳಿತ ಉತ್ತಮ ನಿರ್ಧಾರ ತೆಗೆದುಕೊಂಡು ಜಿಲ್ಲೆಯಲ್ಲಿ 7-8 ಲಕ್ಷ ಗಿಡಗಳನ್ನು ನೆಟ್ಟು ಪೋಷಣೆ ಮಾಡಲು ಮುಂದಾಗಿದೆ.

ಇದು ಇತಿಹಾಸದ ಪುಟಗಳಲ್ಲಿ ದಾಖಲಾಗುವಂತಹ ಕೆಲಸವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾವುಗಳು ಆರೋಗ್ಯಕರವಾಗಿ ಜೀವಿಸಲು ಕಾರಣವಾದ ಪ್ರಕೃತಿಗೆ ಏನು ಕೊಡುಗೆ ನೀಡುತ್ತಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದರ ಮೂಲಕ ಉತ್ತಮ ಪರಿಸರ ನಿರ್ಮಾಣಕ್ಕಾಗಿ ಕಾರ್ಯೋನ್ಮುಖರಾಗಬೇಕು. ಸಮಾಜದ ಜವಾಬ್ದಾರಿಯುತ ಪ್ರಜೆಯಾಗಿ ಪರಿಸರ ಸಂರಕ್ಷಣೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಬೇಕು ಎಂದು ಹೇಳಿದರು.

ಮನುಕುಲ ನೆಮ್ಮದಿ ಜೀವನ ನಡೆಸಲು ಸಹಕಾರಿ ಆಗುವಂತೆ ನಮ್ಮ ದೊಡ್ಡ ಶತ್ರುವಾದ ಪ್ಲಾಸ್ಟಿಕ್ ಬಳಕೆಯನ್ನು ಮಿತಗೊಳಿಸಬೇಕು ಎಂದರಲ್ಲದೆ, ನೀರನ್ನು ಕೂಡ ಮಿತವಾಗಿ ಬಳಸಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಹಾಸನ ಸ್ಪರ್ಧಾ ಕುಟೀರದ ಸದುಪಯೋಗ ಪಡಿಸಿಕೊಂಡು ಪ್ರತಿಫಲ ನೀಡುವ ಹೊಣೆಗಾರಿಕೆ ಯುವ ಜನತೆಯ ಮೇಲಿದೆ ಈ ನಿಟ್ಟಿನಲ್ಲಿ ಆಸಕ್ತಿವಹಿಸಿ ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಇದೊಂದು ಸುವರ್ಣಾವಕಾಶ ಎಂದು ತಿಳಿಸಿದರು.

ಪ್ರತಿಯೊಬ್ಬ ಮಕ್ಕಳಿಗೂ ಜೀವನಕ್ಕೆ ಬುನಾದಿಯಾಗಿ ಶಿಕ್ಷಣಬೇಕು. ಈ ಕುಟೀರವು ಯುವ ಜನತೆ ಭವಿಷ್ಯವನ್ನು ರೂಪಿಸಿಕೊಳ್ಳಲು ಒಂದು ಉತ್ತಮ ವೇದಿಕೆಯಾಗಿದೆ ಎಂದು ತಿಳಿಸಿದರು.

ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಈ ಕುಟೀರ ನೆರವಾಗಲಿದೆ ವೈಫೈ ವ್ಯವಸ್ಥೆ ಹಾಗೂ ಇಂಟರ್ನೆಟ್ ಸಂಪರ್ಕ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಹಸಿರು ಹಾಸನ ನಿರ್ಮಾಣ ಮಾಡಲು 7-8 ಲಕ್ಷ ಗಿಡಗಳನ್ನು ಜೂನ್ ನಿಂದ ಆಗಸ್ಟ್ ತಿಂಗಳಿನಲ್ಲಿ ನೆಟ್ಟು ಪೋಷಣೆ ಮಾಡಲು ನಿರ್ಧರಿಸಲಾಗಿದ್ದು, ಸಾರ್ವಜನಿಕರು ಕೂಡ ಸಹಕಾರ ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್ ಪೀರ್, ಗ್ರಂಥಾಯಲದ ಅಧಿಕಾರಿಗಳಾದ ನಳಿನಿ, ಹಸಿನ ತಾಜ್, ಎ.ಸಿ.ಎಫ್. ಮೋಹನ್, ತಹಸೀಲ್ದಾರ್ ಗೀತಾ ಉಪಸ್ಥಿತರಿದ್ದರು.

# ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಗೆ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜಾವಗಲ್: ಪ್ರತಿಯೊಬ್ಬರೂ ಕನಿಷ್ಟ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದರಿಂದ ಗಂಭೀರ ಸಮಸ್ಯೆಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಉಂಡಿಗನಾಳು ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಕೆ. ಆರ್.ದೀಪಕ್ ಸಲಹೆ ನೀಡಿದರು.

ಹೋಬಳಿಯ ಬಂದೂರು ಗ್ರಾಮದಲ್ಲಿ ಉಂಡಿಗನಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗು ಹರ್ಷಿತ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಅನೀಮಿಯಾ ಮುಕ್ತ ಭಾರತ ಅಭಿಯಾನದ ಅಂಗವಾಗಿ 50ಕ್ಕೂ ಹೆಚ್ಚು ಗ್ರಾಮಸ್ಥರ ಆರೋಗ್ಯ ತಪಾಸಣೆ ನಡೆಸಲಾಗಿದೆ. ಈ ಪೈಕಿ 20ಕ್ಕೂ ಹೆಚ್ಚು ಮಂದಿಯಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆಯಿರುವುದು ಪತ್ತೆಯಾಗಿದೆ. ಅಂತಹವರಿಗೆ ಉಚಿತವಾಗಿ ಕಬ್ಬಿಣಾಂಶ (ಐರನ್) ಮಾತ್ರೆಗಳು ಹಾಗೂ ಸಿರಪ್ ವಿತರಿಸಲಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಮಾಮಹೇಶ್ವರಪ್ಪ ಅವರು ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ಇಂತಹ ಆರೋಗ್ಯ ಶಿಬಿರಗಳ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು.



ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ವಿಶೇಷವಾಗಿ ರಕ್ತದೊತ್ತಡ, ಮಧುಮೇಹ ಮತ್ತು ರಕ್ತಹೀನತೆ (ಅನೀಮಿಯಾ) ಸೇರಿ ಅಸಾಂಕ್ರಾಮಿಕ ರೋಗಗಳ ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಶಿಬಿರದಲ್ಲಿ ಆರೋಗ್ಯ ಸಿಬ್ಬಂದಿ, ಹರ್ಷಿತ ಸಂಸ್ಥೆಯ ಪ್ರಯೋಗಾಲಯ ತಂತ್ರಜ್ಞ ಅಭಿಷೇಕ್, ತಾಲ್ಲೂಕು ಘಟಕದ ಸಂಯೋಜಕರು, ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ತಪಾಸಣೆ ಕಾರ್ಯದಲ್ಲಿ ಭಾಗವಹಿಸಿದ್ದರು.

# ಪ್ರಕೃತಿ ರಕ್ಷಣೆ ಪುಣ್ಯದ ಕೆಲಸ: ರಂಗಸ್ವಾಮಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಾಲುಮರದ ತಿಮ್ಮಕ್ಕ ಅವರ ಆಶಯದಂತೆ ಪರಿಸರ ಬೆಳೆಸುವುದು ಪುಣ್ಯದ ಕಾಯಕವಾಗಿದ್ದನ್ನು ಅರಿತು ಗುಂಡು ತೋಪಿನಲ್ಲಿ ನೆಟ್ಟ ಕಾಡು ಜಾತಿಯ ಗಿಡಗಳು ಹಸಿರು ವನವಾಗಿ ಮಾರ್ಪಟ್ಟಿದೆ ಎಂದು ಮಲ್ಲಿಪಟ್ಟಣ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಆರ್. ರಂಗಸ್ವಾಮಿ ತಿಳಿಸಿದರು.

ತಾಲೂಕಿನ ಮದಲಾಪುರ ಗ್ರಾಮದ ಗುಂಡು ತೋಪಿನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಟ್ಟು ಮಾತನಾಡಿದ ಅವರು, ದಶಕದ ಹಿಂದೆ ಇಲ್ಲಿ ನೆಟ್ಟ ನೂರಾರು ಗಿಡಗಳು ಬೆಳೆದು ಪರಿಸರಕ್ಕೆ ಕೊಡುಗೆಯಾಗಿವೆ. ಖಾಲಿ ಉಳಿದಿರುವ ಜಾಗಕ್ಕೆ ಈಗ ಮತ್ತಷ್ಟು ಗಿಡಗಳನ್ನು ನೆಡಲಾಗುತ್ತಿದೆ ಎಂದರು.

ಪರಿಸರ ಸಂರಕ್ಷಣೆಗೆ ಒತ್ತು ನೀಡಿ ಪ್ರತಿಯೊಬ್ಬರೂ ಕನಿಷ್ಠ ಒಂದು ಮರವನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಪ್ರಕೃತಿಯ ಉಳಿವಿಗೆ ತಮ್ಮದೇ ಆದ ಕೊಡುಗೆ ನೀಡಬೇಕು. ಅರಣ್ಯ ನಾಶ, ಜಾಗತಿಕ ತಾಪಮಾನ ಏರಿಕೆ ಹಾಗೂ ಮಾಲಿನ್ಯದಿಂದ ಪರಿಸರ ಸಮತೋಲನ ಹದಗೆಡುತ್ತಿದ್ದು, ಮುಂದಿನ ಪೀಳಿಗೆಗೆ ಆರೋಗ್ಯಕರ ವಾತಾವರಣವನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಮರಗಳು ಮಾನವನ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಶುದ್ಧ ಗಾಳಿ, ಮಳೆ ಹಾಗೂ ಜೀವ ವೈವಿಧ್ಯತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕಳೆದ ಹಲವು ವರ್ಷಗಳಿಂದ ತಾವು ನೆಟ್ಟ ವಿವಿಧ ಕಾಡು ಜಾತಿಯ ಮರಗಳು ಇಂದು ದಟ್ಟವಾಗಿ ಬೆಳೆದು ನಿಂತಿವೆ. ನಾವೆಲ್ಲ ಪ್ಲಾಸ್ಟಿಕ್ ಬಳಕೆಯನ್ನು ಕೂಡ ಕಡಿಮೆ ಮಾಡಿ, ನೀರಿನ ಸಂರಕ್ಷಣೆ, ವೃಕ್ಷಾರೋಪಣ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಕೃತಿಯನ್ನು ಉಳಿಸಬಹುದು. ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದರು.

ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಜಯಸ್ವಾಮಿ, ಎಸ್.ಡಿ.ಎಂ.ಸಿ. ಅಧ್ಯಕ್ಷ ಮಣಿಕಂಠ, ಸದಸ್ಯ ವಿಠಲ, ಅಂಗನವಾಡಿ ಶಿಕ್ಷಕಿ ಮೋದಾಮಣಿ, ಶಾಲಾ ವಿದ್ಯಾರ್ಥಿಗಳು ಇದ್ದರು.

# ರಸಗೊಬ್ಬರ ದುರುಪಯೋಗ ತಡೆಗೆ ಎಫ್ಐಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಆಧಾರ್‌ಗೆ ಜೋಡಣೆಗೊಂಡಿರುವ ಎಫ್ಐಡಿ ವ್ಯವಸ್ಥೆಯಿಂದ ರೈತರು ಯಾವುದೇ ಅಧಿಕೃತ ಮಾರಾಟ ಕೇಂದ್ರದಲ್ಲಿ ರಸಗೊಬ್ಬರ ಖರೀದಿಸಿದರೂ ವಿವರ ತಂತ್ರಾಂಶದಲ್ಲಿ ದಾಖಲಾಗಲಿದೆ. ಅದರಿಂದ ದುರುಪಯೋಗದ ತಡೆಯಲು ನೆರವಾಗಲಿದೆ ಎಂದು ಉಪ ಕೃಷಿ ನಿರ್ದೇಶಕ ಪ್ರಭಾಕರ್ ಹೇಳಿದರು.

ತಾಲ್ಲೂಕಿನ ಕೃಷಿ ಇಲಾಖೆಯಲ್ಲಿ ಯೂರಿಯಾ ಹಾಗೂ ಇತರೆ ರಸಗೊಬ್ಬರಗಳ ವಿತರಣೆಯನ್ನು ಪಾರದರ್ಶಕ ಮತ್ತು ನಿಯಮಬದ್ಧವಾಗಿ ನಿರ್ವಹಿಸುವ ಉದ್ದೇಶದಿಂದ ರಸಗೊಬ್ಬರ ಮಾರಾಟಗಾರರು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ಯೂರಿಯಾ ರಸಗೊಬ್ಬರವನ್ನು ಕರ್ನಾಟಕ ಕೃಷಿ ಇಲಾಖೆಯ ಕೆ-ಕಿಸಾನ್ ತಂತ್ರಾಂಶದ ಮೂಲಕ ರೈತರ ಎಫ್ಐಡಿ ಆಧಾರದಲ್ಲಿಯೇ ವಿತರಿಸಬೇಕೆಂದು ಸೂಚಿಸಿದರು.

ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್



ಕುಮಾರ್ ಮಾತನಾಡಿ, ರಸಗೊಬ್ಬರ ಮಾರಾಟಗಾರರು ವಿತರಣೆ ಮತ್ತು ದಾಸ್ತಾನು ವಿವರಗಳನ್ನು ನಿಯಮಿತವಾಗಿ ದಾಖಲಿಸುವುದರ ಜೊತೆಗೆ, ಕೇಂದ್ರ ಸರ್ಕಾರದ ಪಾಯಿಂಟ್ ಆಫ್ ಸೇಲ್ ತಂತ್ರಾಂಶದಲ್ಲಿ ಎಲ್ಲಾ ವಹಿವಾಟುಗಳನ್ನು ದಾಖಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಸರ್ಕಾರದ ಸಹಾಯಧನ ಹೊರತುಪಡಿಸಿ ರೈತರು ಪಾವತಿಸಬೇಕಾದ ಮೊತ್ತವನ್ನು ನಾಮಫಲಕದಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು. ಅಧಿಕೃತ ಪರವಾನಿಗೆ ಪಡೆದ ಮಾರಾಟಗಾರರಿಂದ ಮಾತ್ರ ರಸಗೊಬ್ಬರ ಖರೀದಿಸಬೇಕು. ಅನಧಿಕೃತ ಮಾರಾಟ ಕಂಡುಬಂದರೆ ರಸಗೊಬ್ಬರ ನಿಯಂತ್ರಣ ಆದೇಶ ಹಾಗೂ ಅಗತ್ಯ ವಸ್ತುಗಳ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ತಾಲ್ಲೂಕಿನಲ್ಲಿ ಒಟ್ಟು 42 ಪರವಾನಿಗೆ ಪಡೆದ ರಸಗೊಬ್ಬರ ಮಾರಾಟಗಾರರಿದ್ದು, 31 ಮಂದಿ ಸಕ್ರಿಯರಾಗಿದ್ದಾರೆ. 2025-26ನೇ ಸಾಲಿನಲ್ಲಿ 38,607 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆ ನಡೆದಿದ್ದು, ಅದರಲ್ಲಿ 7,713 ಮೆಟ್ರಿಕ್ ಟನ್ ಯೂರಿಯಾ ಸೇರಿದೆ ಎಂದು ಮಾಹಿತಿ ನೀಡಿದರು.

ಹೆಚ್ಚಿನ ಮಳೆಯ ಪರಿಣಾಮ ಮಣ್ಣಿನ ರಸಸಾರ ಕುಸಿಯುತ್ತಿರುವುದರಿಂದ ರೈತರು ಮಣ್ಣು ಪರೀಕ್ಷೆ ಆಧರಿಸಿ ವೈಜ್ಞಾನಿಕ ಶಿಫಾರಸ್ಸಿನಂತೆ ರಸಗೊಬ್ಬರ ಬಳಕೆ ಮಾಡಬೇಕು. ಯೂರಿಯಾ ಬಳಕೆಗೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಸಿಂಪರಣೆ, ಸಾವಯವ ಹಾಗೂ ನೈಸರ್ಗಿಕ ಕೃಷಿ ಪದ್ಧತಿಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಕೃಷಿ ಇಲಾಖೆಯ ಜಾಗೃತಿ ದಳದ ಸಹಾಯಕ ಕೃಷಿ ನಿರ್ದೇಶಕ ಯೋಗಾನಂದ ಅವರು, ಕೆ-ಕಿಸಾನ್ ತಂತ್ರಾಂಶದಲ್ಲಿ ಯೂರಿಯಾ ವಿತರಣೆ ದಾಖಲಿಸುವ ಕುರಿತು ಮಾರಾಟಗಾರರಿಗೆ ತರಬೇತಿ ನೀಡಿದರು.

ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್, ಕೃಷಿ ಅಧಿಕಾರಿ ಕೇಶವಮೂರ್ತಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್, ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷ ಅಜಿತ್ ಹಾಗೂ ಸಂಘದ ಪದಾಧಿಕಾರಿಗಳು, ಮಾರಾಟಗಾರರು ಮತ್ತು ಸಹಕಾರ ಸಂಘಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಡೆಬಿಟ್ ಕಾರ್ಡ್ ಬದಲಿಸಿ ವಂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವ್ಯಕ್ತಿಯ ಗಮನ ಬೇರೆಡೆ ಸೆಳೆದು ಡೆಬಿಟ್ ಕಾರ್ಡ್ ಬದಲಿಸಿ 68 ಸಾವಿರ ರೂ. ದೋಚಿರುವ ಘಟನೆ ನಗರದಲ್ಲಿ ನಡೆದಿದೆ.

ಅರಕಲಗೂಡು ತಾಲ್ಲೂಕು ಬೆಟ್ಟದಹಳ್ಳಿ ಗ್ರಾಮದ ಲಿಂಗಪ್ಪ ಮೋಸಕ್ಕೊಳಗಾದವರು. ಅನಾರೋಗ್ಯ ಹಿನ್ನೆಲೆಯಲ್ಲಿ ನಗರದ ಆಸ್ಪತ್ರೆಗೆ ಬಂದಿದ್ದ ಅವರು ಎನ್.ಆರ್. ವೃತ್ತದಲ್ಲಿರುವ ಎಟಿಎಂಗೆ ಹಣ ಪಡೆಯಲು ಹೋಗಿದ್ದರು. ಎಟಿಎಂಗೆ ಡೆಬಿಟ್ ಕಾರ್ಡ್ ಹಾಕಿ ಪಾಸ್‌ವರ್ಡ್ ಒತ್ತುತ್ತಿದ್ದಂತೆ ಬಾಗಿಲು ತೆರೆದು ಒಳಬಂದ ಮೂವರು ಅಪರಿಚಿತರು ಮೇಲೆ ನೋಡಿ ಎಂದಿದ್ದಾರೆ. ಲಿಂಗಪ್ಪ ಹಾಗೆ ಮಾಡುತ್ತಿದ್ದಂತೆ ಇಲ್ಲಿ ಹಣ ಬರುವುದಿಲ್ಲ ಬೇರೆ ಎಟಿಎಂಗೆ ಹೋಗಿ ಎಂದಿದ್ದಾರೆ. ಲಿಂಗಪ್ಪ ಅವರು ಪ್ರಧಾನ ಅಂಚೆ ಕಚೇರಿ ಸಮೀಪದ ಮತ್ತೊಂದು ಎಟಿಎಂಗೆ ಹೋಗಿ ಹಣ ತೆಗೆಯಲು ಪ್ರಯತ್ನಿಸುತ್ತಿದ್ದಾಗ ಅಷ್ಟರಲ್ಲಿ 68,373 ರೂ. ಡ್ರಾ ಆಗಿರುವ ಮೊಬೈಲ್ ಸಂದೇಶ ಬಂದಿದೆ. ಅಪರಿಚಿತರು ಡೆಬಿಟ್ ಕಾರ್ಡ್ ಬದಲಿಸಿ ಬೇರೆ ಕಾರ್ಡ್ ಕೊಟ್ಟಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್-07

1776: ಅಮೆರಿಕದ ಸ್ವಾತಂತ್ರ್ಯಕ್ಕೆ ಮುನ್ನುಡಿ ಬರೆದ ನಿರ್ಣಯವನ್ನು ರಿಚರ್ಡ್ ಹೆನ್ರಿ ಲೀ ಕಾಂಗ್ರೆಸ್‌ನಲ್ಲಿ ಮಂಡಿಸಿದರು.

1929: ಇಟಲಿಯ ಲ್ಯಾಟರನ್ ಒಪ್ಪಂದ ಜಾರಿಗೆ ಬಂದು ವ್ಯಾಟಿಕನ್ ನಗರ ಸ್ವತಂತ್ರ ರಾಷ್ಟ್ರವಾಗಿ ಅಧಿಕೃತ ಮಾನ್ಯತೆ ಪಡೆಯಿತು.

1942: ದ್ವಿತೀಯ ಮಹಾಯುದ್ಧದ ನಿರ್ಣಾಯಕ ಘಟ್ಟವಾದ ಮಿಡ್‌ವೇ ಯುದ್ಧ ಅಮೆರಿಕದ ವಿಜಯದೊಂದಿಗೆ ಅಂತ್ಯಗೊಂಡಿತು.

1975: ವಿಶ್ವದ ಮೊದಲ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿ ಇಂಗ್ಲೆಂಡ್‌ನಲ್ಲಿ ಆರಂಭವಾಯಿತು.

1981: ಇಸ್ರೇಲ್ ಇರಾಕ್‌ನ ಒಸಿರಾಕ್ ಅಣು ಸ್ಥಾವರದ ಮೇಲೆ ವೈಮಾನಿಕ ದಾಳಿ ನಡೆಸಿತು.

### ಜನನ

1952: ಲಿಯಾಮ್ ನೀಸನ್, ಖ್ಯಾತ ಹಾಲಿವುಡ್ ನಟ

1958: ಪ್ರಿನ್ಸ್ ರೋಜರ್ಸ್ ನೆಲ್ಸನ್, ವಿಶ್ವಪ್ರಸಿದ್ಧ ಗಾಯಕ, ಗೀತರಚನೆಕಾರ ಮತ್ತು ಸಂಗೀತಗಾರ

1975: ಅಲೆನ್ ಐವರ್ಸನ್, ಅಮೆರಿಕದ ಪ್ರಸಿದ್ಧ ಬ್ಯಾಸ್ಕೆಟ್‌ಬಾಲ್ ಆಟಗಾರ

### ನಿಧನ

1954: ಅಲನ್ ಟ್ಯೂರಿಂಗ್, ಆಧುನಿಕ ಕಂಪ್ಯೂಟರ್ ವಿಜ್ಞಾನದ ಪಿತಾಮಹರಲ್ಲಿ ಒಬ್ಬರು

2015: ಕ್ರಿಸ್ಟೋಫರ್ ಲೀ, ಖ್ಯಾತ ಬ್ರಿಟಿಷ್ ಚಲನಚಿತ್ರ ನಟ

# ಆರೋಗ್ಯಯುತ ಬದುಕಿಗೆ ಪರಿಸರ ಪೂರಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪರಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಒಳ್ಳೆಯ ಪರಿಸರ ಇದ್ದಾಗ ಆರೋಗ್ಯವಂತ ಬದುಕು ಸಾಧ್ಯ ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ತಿಳಿಸಿದರು.

ಪಟ್ಟಣ ಪಂಚಾಯಿತಿ ಮತ್ತು ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿ, ಹಸಿರು ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ ಎಂದರು.

ಪಪಂ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಮಾತನಾಡಿ, ಪಪಂ ಕಸದ ಗಾಡಿ ಬಂದಾಗ ಒಣ ಮತ್ತು ಹಸಿ ಕಸವನ್ನು ವಿಂಗಡಿಸಿ ನೀಡಬೇಕು. ಎಲ್ಲೆಂದರಲ್ಲಿ ಕಸ ಹಾಕಿ ಪರಿಸರ ಮಾಲಿನ್ಯ ಗೊಳಿಸಬಾರದು ಎಂದರು.




ಕಾರ್ಯಕ್ರಮದಲ್ಲಿ ನೆರೆದಿದ್ದ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳು ಪ್ರಕೃತಿ ಮಾತೆಯ ಹೆಸರಿನಲ್ಲಿ ಪ್ರತಿಜ್ಞಾವಿಧಿ ಪಡೆದರು. ವಿದ್ಯಾರ್ಥಿಗಳಲ್ಲಿ ಪರಿಸರ ಪ್ರಜ್ಞೆ ಮೂಡಿಸಲು ಜಾಗೃತಿ ಜಾಥಾ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಿಇಒ ಕೆ.ಪಿ. ನಾರಾಯಣ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹನ್ಯಾಳು ಕುಮಾರ್, ತಾಲೂಕು ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಸಂಜೀವ್ ಕುಮಾರ್ ಉಪಸ್ಥಿತರಿದ್ದರು.

ಪಟ್ಟಣದ ಮಲ್ನಾಡ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಪರಸರ ಜಾಗೃತಿ ಜಾತಾ ನಡೆಸಿದರು. ಅನಕೃ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸದರಲ್ಲದೆ ವಿದ್ಯಾರ್ಥಿಗಳು ಪರಿಸರ ಗೀತೆಗೆ ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆದರು. ಸಾರ್ವಜನಿಕರಿಗೆ ಹಣ್ಣಿನ ಗಿಡಗಳನ್ನು ವಿತರಿಸಲಾಯಿತು.

ಸೆಸ್ಕ್‌ನಿಂದ ರಕ್ತದಾನ ಶಿಬಿರ: ಪಟ್ಟಣದ ಸೆಸ್ಕ್ ಸಿಬ್ಬಂದಿ ಪರಿಸರ ದಿನಾಚರಣೆ ಪ್ರಯುಕ್ತ ರಕ್ತದಾನ ಶಿಬಿರ ಹಮ್ಮಿಕೊಂಡಿದ್ದು 55 ಬಾಟಲಿ ರಕ್ತ ಸಂಗ್ರಹಿಸಲಾಯಿತು. ಕಚೇರಿ ಆವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡಲಾಯಿತು.

ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ನೇತೃತ್ವದಲ್ಲಿ ತಾಲ್ಲೂಕಿನ ರಾಮೇನಹಳ್ಳಿ ಪ್ರಾಥಮಿಕ ಶಾಲಾ ಆವರಣ ಮತ್ತು ದೇವಾಲಯದ ಅವರಣದಲ್ಲಿ ಹಣ್ಣಿನ ಗಿಡಗಳನ್ನು ನಡೆಲಾಯಿತು. ಮುಖಂಡರಾದ ಮಾದೇಶ್, ಪಾಂಡುರಂಗ, ಲೋಕೇಶ್ ನಸ್ರುಲ್ಲಾ ಉಪಸ್ಥಿತರಿದ್ದರು.

# ಗಿಡಗಳನ್ನು ಪೋಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಸಾಮಾಜಿಕ ಅರಣ್ಯ ಇಲಾಖೆ, ಕರ್ನಾಟಕ ಔಷಧಿ ಗಿಡಮೂಲಿಕೆಗಳ ಪ್ರಾಧಿಕಾರ, ಬೆಂಗಳೂರು ಎಸಿಸಿಆರ್ ಯೂಇಡಿ ಟ್ರಸ್ಟ್, ಮೈ ಭಾರತ್ ಕೇಂದ್ರ, ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ವತಿಯಿಂದ ಅರಸೀಕೆರೆ ರಸ್ತೆಯ ಕೋರವಂಗಲ ಟ್ರೀ ಪಾರ್ಕ್‌ನಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಚಿತ್ಕಲಾ ಫೌಂಡೇಶನ್ ಅಧ್ಯಕ್ಷ ಬಿ.ಎಸ್. ದೇಸಾಯಿ ಮಾತನಾಡಿ, ವಿಶ್ವ ಪರಿಸರ ದಿನ ಕೇವಲ ಆಚರಣೆ ಆಗದೆ ಪ್ರಕೃತಿಯನ್ನು ರಕ್ಷಿಸುವ, ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಬೇಕು. ಪಕ್ಷಿ ಪ್ರಾಣಿ ಸಕಲ ಜೀವ ಜಂತುಗಳು ಪರಿಸರಕ್ಕೆ ಪೂರಕವಾಗಿ ಬದುಕುತ್ತವೆ.




ಭೂಮಿಯ ರಕ್ಷಣೆ ಗಾಳಿ, ನೀರು, ಮಣ್ಣಿನ ಮಾಲಿನ್ಯ ತಡೆಗಟ್ಟಿ, ಮುಂದಿನ ಪೀಳಿಗೆಗೆ ಸುರಕ್ಷಿತ ಹಸಿರು ಭೂಮಿಯನ್ನು ಬಿಟ್ಟುಕೊಡುವುದು ಮುಖ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ಹಾಗೂ ಜಾಗತಿಕ ತಾಪಮಾನ ಏರಿಕೆಯಿಂದ ಪ್ರಕೃತಿ ಸಮತೋಲನ ಹದಗೆಡುತ್ತಿದೆ. ಪ್ರತಿಯೊಬ್ಬರು ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಅಗತ್ಯ ಎಂದರು.

ಕೋರವಂಗಲ ಟ್ರೀ ಪಾರ್ಕ್‌ನಲ್ಲಿ 600 ಕ್ಕೂ ಹೆಚ್ಚು, ಕೆ.ಎಸ್.ಆರ್.ಟಿ.ಸಿ. ತರಬೇತಿ ಕೇಂದ್ರದಲ್ಲಿ 500, ರೆಡ್ ಕ್ರಾಸ್ ಕಚೇರಿ ಮುಂಭಾಗ 50, ರೆಡ್ ಕ್ರಾಸ್ ಪಾರ್ಕ್‌ನಲ್ಲಿ 50 ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತಿರುವುದಾಗಿ ಹೇಳಿದರು. ಡಿಆರ್‌ಎಫ್ಒ ರವೀಲಾ ಮಾತನಾಡಿ, ಭವಿಷ್ಯದ ಪೀಳಿಗೆಯ ಉಳಿವಿಗಾಗಿ ಗಿಡಗಳನ್ನು ನೆಡುವುದು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಪರಿಸರ ಸಮತೋಲನ ನಿಗಾ ಇಡುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ಇದೇ ಸಂದರ್ಭದಲ್ಲಿ 63ಕ್ಕೂ ಹೆಚ್ಚು ವಿವಿಧ ಜಾತಿಯ ಗಿಡಗಳನ್ನು ಮಿಯಾವಾಕಿ ಅರಣ್ಯ ಜಾಗದಲ್ಲಿ ನೆಡಲಾಯಿತು. ರೆಡ್ ಕ್ರಾಸ್ ಉಪಸಭಾಪತಿ ಡಾ.ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಯುವ ಅಧಿಕಾರಿ ಇ.ಎಸ್. ಜಿತ್ಯಾ, ಕರ್ನಾಟಕ ಔಷಧಿ ಗಿಡಮೂಲಿಕೆಗಳ ಪ್ರಾಧಿಕಾರದ ಎಚ್.ಕೆ. ಪುಷ್ಪ, ರೆಡ್ ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹ್ಮದ್, ಹೆಚ್.ಡಿ.ಜಯೇಂದ್ರಕುಮಾರ್, ಡಾ.ರಂಗಲಕ್ಷ್ಮಿ, ಎಸ್.ಎಸ್.ಪಾಷಾ, ಪತ್ರಕರ್ತರು ಬಿ.ಆರ್. ಉದಯಕುಮಾರ್, ಲೀಲಾವತಿ, ಕೆ.ಟಿ.ಜಯಶ್ರೀ, ಅನುಗನಾಳು ಕೃಷ್ಣಮೂರ್ತಿ, ಗಿರಿಗೌಡ ಇತರರಿದ್ದರು.

# ಸ್ವಪ್ನ ಬುಕ್ ಹೌಸ್‌ನಲ್ಲಿ ರಾಷ್ಟ್ರೀಯ ಐತಿಹಾಸಿಕ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎರಡನೇ ಮಹಾಯುದ್ಧವು ಮಾನವ ಇತಿಹಾಸದ ಅತ್ಯಂತ ವಿನಾಶಕಾರಿ ಜಾಗತಿಕ ಸಂಘರ್ಷವಾಗಿದೆ ಎಂದು ಸಾಹಿತಿ ಮೇಟಿಕೆರೆ ಹಿರಿಯಣ್ಣ ಹೇಳಿದರು.

ನಗರದ ಸಪ್ನ ಬುಕ್ ಹೌಸ್ ಸಭಾಂಗಣದಲ್ಲಿ ರಾಜ್ಯ ಸ್ಪಂದನ ಸಿರಿ ವೇದಿಕೆ ಜಿಲ್ಲಾ ಘಟಕ ಹಾಗೂ ಸಪ್ನ ಬುಕ್ ಹೌಸ್ ವತಿಯಿಂದ ಶನಿವಾರ ನಡೆದ ರಾಷ್ಟ್ರೀಯ ಐತಿಹಾಸಿಕ ದಿನ ಮತ್ತು ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದರು.

1939ರಿಂದ 1945ರ ವರೆಗೆ ನಡೆದ 2ನೇ ಮಹಾಯುದ್ಧದಲ್ಲಿ ಜೀವ ಹಾನಿ ಹಾಗೂ ಅಪಾರ ಆಸ್ತಿ-ಪಾಸ್ತಿ ನಷ್ಟವಾಯಿತು. ಮೊದಲ ಮಹಾಯುದ್ಧದ ನಂತರವೇ ಶಾಂತಿ ಸ್ಥಾಪನೆಗೆ ವಿಶ್ವನಾಯಕರು ದೂರದೃಷ್ಟಿಯ ನಿರ್ಧಾರಗಳನ್ನು ಕೈಗೊಂಡಿದ್ದರೆ ಎರಡನೇ ಮಹಾಯುದ್ಧವನ್ನು ತಪ್ಪಿಸಬಹುದಾಗಿತ್ತು ಎಂದರು.

ಸಾಮ್ರಾಜ್ಯ ವಿಸ್ತರಣೆಯ ಹಂಬಲ, ಅತಿಯಾದ ರಾಷ್ಟ್ರೀಯತೆ, ಕೈಗಾರಿಕಾ ಪ್ರಾಬಲ್ಯದ ಸ್ಪರ್ಧೆ ಹಾಗೂ ವೈಜ್ಞಾನಿಕ ಸಾಧನೆಗಳ ಮೇಲಿನ ಹಿಡಿತ ಸಾಧಿಸುವ ಮನೋಭಾವವೇ ಎರಡನೇ ಮಹಾಯುದ್ಧಕ್ಕೆ ಪ್ರಮುಖ ಕಾರಣಗಳಾಗಿದ್ದವು. ಮೂರನೇ ಮಹಾಯುದ್ಧದಂತಹ ಸ್ಥಿತಿ ಎದುರಾದರೆ ಮಾನವ ಕುಲವೇ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುವುದರಿಂದ ವಿಶ್ವ ರಾಷ್ಟ್ರಗಳು ಶಾಂತಿ ಮತ್ತು ಸಹಬಾಳ್ವೆಗೆ ಆದ್ಯತೆ ನೀಡಬೇಕಿದೆ. ಯುದ್ಧಗಳು ಕೇವಲ ಜೀವ ಹಾನಿಗೆ ಸೀಮಿತವಾಗುವುದಿಲ್ಲ, ಕೃಷಿ, ಆರ್ಥಿಕತೆ, ಪರಿಸರ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೂ ದೀರ್ಘಕಾಲದ ಪರಿಣಾಮ ಬೀರುತ್ತವೆ ಎಂದರು.

ಇಂದಿಗೂ ಜಾಗತಿಕ ಸಂಘರ್ಷಗಳ ಪರಿಣಾಮ ಅಗತ್ಯ ವಸ್ತುಗಳ ಬೆಲೆ ಏರಿಕೆ, ಸಂಪನ್ಮೂಲ ಕೊರತೆ ಹಾಗು ಪರಿಸರ ಹಾನಿಯನ್ನು ಅನುಭವಿಸುತ್ತಿದ್ದೇವೆ. ಪ್ರಕೃತಿಯಿಂದ ಎಲ್ಲಾ ರೀತಿಯ ಲಾಭ ಪಡೆಯುತ್ತಿರುವ ಮಾನವನೇ ಪರಿಸರಕ್ಕೆ ಧಕ್ಕೆ ಉಂಟುಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ವಿಷಾದ ವ್ಯಕ್ತಪಡಿಸಿದರು.

# ಗಾಂಜಾ ಸೇವಿಸಿದ್ದ ವ್ಯಕ್ತಿ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಗಾಂಜಾ ಸೇವಿಸಿ ಅನುಚಿತವಾಗಿ ವರ್ತಿಸುತ್ತಿದ್ದ ವ್ಯಕ್ತಿಯನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಳ್ಳುಪೇಟೆಯ ವೃತ್ತದಲ್ಲಿ ವ್ಯಕ್ತಿ ಅಸಭ್ಯವಾಗಿ ವರ್ತಿಸುತ್ತಿರುವ ಕುರಿತು ನಿಖರ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಮಳಲಿ ಗಾಮದ ಭರತ್ ಎಂಬಾತನನ್ನು ಆತನನ್ನು ವಶಕ್ಕೆ ಪಡೆದಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248